# ಕನ್ನಡ ಸಾಹಿತ್ಯ ಪರಿಷತ್ತು

ಸ್ಥಾಪನೆ : ೧೯೧೫

ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦ ೦೧೮
ದೂರವಾಣಿ : ೦೮೦ ೨೬೬೧೨೯೯೧, ೨೬೬೨೩೫೮೪ ಫ್ಯಾಕ್ಸ್ : ೨೬೫೨೩೫೮೬
http://www.kasapa.in e-mail : kannadaparishattu@gmail.com

---

ಕ್ರಮಸಂಖ್ಯೆ : ಕಸಾಪ / ಪತ್ರಿಕಾ ಆಹ್ವಾನ / ೨೦೨೨-೨೩ ದಿನಾಂಕ : ೦೪-೦೫-೨೦೨೨

ಗೆ,
ಮಾನ್ಯ ಸಂಪಾದಕರು

.............................ದಿನಪತ್ರಿಕೆ / ಟಿ.ವಿ. ಮಾಧ್ಯಮ
ಬೆಂಗಳೂರು

ಮಾನ್ಯರೆ,

**ವಿಷಯ : ೧೦೮ನೆಯ ಸಂಸ್ಥಾಪನಾ ದಿನಾಚರಣೆ ಹಾಗೂ ಶತಮಾನೋತ್ಸವ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದ** ವರದಿ ಮಾಡಲು ತಮ್ಮ ಪತ್ರಿಕೆಯ ವರದಿಗಾರರು ಹಾಗೂ ಛಾಯಾಗ್ರಾಹಕರನ್ನು ಕಳುಹಿಸಿಕೊಡುವ ಬಗ್ಗೆ.

* * *

ಕನ್ನಡ ಸಾಹಿತ್ಯ ಪರಿಷತ್ತು **ದಿನಾಂಕ ೦೫-೦೫-೨೦೨೨ರ ಗುರುವಾರ ಬೆಳಗ್ಗೆ** ೧೧.೦೦ಕ್ಕೆ ಮೂರನೆಯ ಮಹಡಿಯಲ್ಲಿರುವ **ಕುವೆಂಪು ಸಭಾಂಗಣದಲ್ಲಿ "೧೦೮ನೆಯ ಸಂಸ್ಥಾಪನಾ ದಿನಾಚರಣೆ** ಹಾಗೂ **ಶತಮಾನೋತ್ಸವ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ"**ವನ್ನು ಏರ್ಪಡಿಸಲಾಗಿದೆ. **ಶತಮಾನೋತ್ಸವ ದತ್ತಿ ಪ್ರಶಸ್ತಿ**ಗೆ ಕಸಾಪದ ಮಾಜಿ ಅಧ್ಯಕ್ಷರಾದ **ಡಾ. ಆರ್. ಕೆ. ನಲ್ಲೂರು ಪ್ರಸಾದ್** ಅವರು ಭಾಜನರಾಗಿದ್ದು, ಇವರಿಗೆ ಪರಿಷತ್ತಿನ ಮಾಜಿ ಅಧ್ಯಕ್ಷರಾದ **ಶ್ರೀ ಹರಿಕೃಷ್ಣ ಪುನರೂರು** ಅವರು ಪ್ರಶಸ್ತಿಯನ್ನು ಪ್ರದಾನ ಮಾಡಲಿದ್ದಾರೆ.

ಇದಲ್ಲದೆ, ಸಿಬ್ಬಂದಿಗಳಿಗೆಂದೇ **ಶ್ರೀ ಎಂ.ಜಿ. ನಾಗರಾಜು** ಅವರು ಪರಿಷತ್ತಿನಲ್ಲಿ ಸ್ಥಾಪಿಸಿರುವ **ಶ್ರೀಮತಿ ವಿ. ಗೌರಮ್ಮ ಗಂಗಾಧರಯ್ಯ ಸೇವಾ ಸಿಬ್ಬಂದಿ ದತ್ತಿ ಪ್ರಶಸ್ತಿ**ಗೆ ಪರಿಷತ್ತಿನ ನಿವೃತ್ತ ಸಿಬ್ಬಂದಿಗಳಾದ **ಶ್ರೀ ಜಗನ್ನಾಥ ಹೇಮಾದ್ರಿ** ಹಾಗೂ **ಶ್ರೀ ಮಂಜಯ್ಯ** ಅವರು ಮತ್ತು ಹಾಲಿ ಸಿಬ್ಬಂದಿ **ಶ್ರೀ ರಾಜು** ಅವರುಗಳು ಭಾಜನರಾಗಿದ್ದಾರೆ.

ಮೊದಲ ಬಾರಿಗೆ ಪರಿಷತ್ತು ಕನ್ನಡ ಪರಿಚಾರಕ ಪುರಸ್ಕಾರವನ್ನು ನೀಡುತ್ತಿದ್ದು, ಈ ಪ್ರಶಸ್ತಿಗೆ **ಶ್ರೀ ಮ.ಅ. ವೆಂಕಟೇಶ್** ಹಾಗೂ **ಶ್ರೀಮತಿ ಶೋಭಾ ಸುನೀಲ ಗುಂಡಮಿ** ಅವರುಗಳು ಭಾಜನರಾಗಿರುತ್ತಾರೆ.

ಈ ಸಮಾರಂಭದಲ್ಲಿ **"ಕನ್ನಡ ಮನಸ್ಸುಗಳ ಮೇಲೆ ಕನ್ನಡ ಸಾಹಿತ್ಯ ಪರಿಷತ್ತು ಬೀರಿದ ಪ್ರಭಾವ"**ದ ಕುರಿತು ಕಸಾಪದ ನಿವೃತ್ತ ವ್ಯವಸ್ಥಾಪಕರಾದ **ಶ್ರೀ ಜಗನ್ನಾಥ ಹೇಮಾದ್ರಿ** ಅವರು ಮಾತನಾಡಲಿದ್ದಾರೆ, ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಮಾನ್ಯ ಅಧ್ಯಕ್ಷರಾದ **ನಾಡೋಜ ಡಾ. ಮಹೇಶ ಜೋಶಿ** ಅವರು ವಹಿಸಲಿದ್ದಾರೆ.

ಈ ಸಮಾರಂಭದಲ್ಲಿ, **ಸಾಹಿತಿಗಳು, ಗಣ್ಯರು** ಭಾಗವಹಿಸಲಿದ್ದು. ಈ ಸಭೆಯಲ್ಲಿ ಮೂಡಿಬರುವ ವಿಚಾರಗಳನ್ನು ನಾಡಿನ ಜನತೆಗೆ ತಿಳಿಸಲು ತಮ್ಮ ಪತ್ರಿಕೆಯ ವರದಿಗಾರರು ಹಾಗೂ ಛಾಯಾಗ್ರಾಹಕರನ್ನು ಕಳುಹಿಸಿಕೊಡಬೇಕಾಗಿ ವಿನಂತಿ.

ಇದರೊಂದಿಗೆ ಆಹ್ವಾನಪತ್ರಿಕೆ ಲಗತ್ತಿಸಿದೆ.

ವಂದನೆಗಳೊಂದಿಗೆ,

**ತಮ್ಮ ವಿಶ್ವಾಸಿ**

**(ನೇ.ಭ. ರಾಮಲಿಂಗಶೆಟ್ಟಿ)**
ಗೌರವ ಕಾರ್ಯದರ್ಶಿಗಳು